ಡಿಡಬ್ಲ್ಯೂ:1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 16-08-2025**

ಮುಂದುವರಿದ ಪಾಟೀ ಸವಾಲು : ವಾದಿ ಪರಃ ಶ್ರೀ ಆರ್.ಎಮ್. ವಕೀಲರಿಂದಃ

ನನ್ನ ಮಗ ಈಗ 8 ನೇ ತರಗತಿಯಲ್ಲಿ ಓದುತ್ತಿದ್ದಾನೆ. ಅವನು ಯಾವ ಶಾಲೆಯಲ್ಲಿ ಓದುತ್ತಿದ್ದಾನೆ ಎಂದರೆ ಗೊತ್ತಿಲ್ಲ. ನಾನು ನನ್ನ ಮಗ ಯಾವ ಶಾಲೆಯಲ್ಲಿ ಓದುತ್ತಿದ್ದಾನೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಮಗ ಮುನಿಯಾಲು ನಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಕಲಿಯುತ್ತಿದ್ದಾನೆ ಎಂದರೆ ಇರಬಹುದು. ಸದ್ರಿ ಶಾಲೆಯಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗಲು ಬಸ್ಸು ವ್ಯವಸ್ಥೆ ಇದೆ ಎಂದರೆ ಇರಬಹುದು. ಬಸ್ಸಿಗೆ ರೂ. 15,000/- ಶುಲ್ಕ ತೆಗೆದುಕೊಳ್ಳುತ್ತಾರೆ ಎಂದರೆ ಗೊತ್ತಿಲ್ಲ. ಅದು ಸರ್ಕಾರಿ ಶಾಲೆ. ವಾದಿಯ ಮನೆಯಿಂದ ಕರ್ನಾಟಕ ಪಬ್ಲಿಕ್ ಶಾಲೆ ಮುನಿಯಾಲಿಗೆ 8 ಕಿ.ಮೀ ದೂರ ಇದೆ ಎಂದರೆ 6 ಕಿ.ಮೀ ದೂರ ಇದೆ. ಸದ್ರಿ ಶಾಲೆಯಲ್ಲಿ ತಮ್ಮ ಶಾಲೆಗೆ

ಸಂಬಂಧಿಸಿದ ಮಕ್ಕಳನ್ನು ಧರ್ಮಕ್ಕೆ ಕರೆದುಕೊಂಡು ಹೋಗುತ್ತಾರೆ ಎನ್ನುವುದಕ್ಕೆ ನನ್ನ ಬಳಿ ದಾಖಲೆ ಇರುವುದಿಲ್ಲ.

ನನ್ನ ಮಗನ ಶೈಕ್ಷಣಿಕ ವೆಚ್ಚ ಭರಿಸಲು ಹಣ ಕೊಡುತ್ತಿದ್ದೆ, ಆ ಬಗ್ಗೆ ದಾಖಲೆ ಇದೆ. ನ್ಯಾಯಾಲಯಕ್ಕೆ ಈಗಾಗಲೇ ನಾನು ಹಾಜರುಪಡಿಸಿದ ದಾಖಲೆಗಳನ್ನು ಬಿಟ್ಟು ಬೇರೆ ದಾಖಲೆಗಳು ಇವೆಯಾ ಎಂದರೆ ಇಲ್ಲ. ಮಗುವಿಗೆ ಸಂಬಂಧಿಸಿದ ಎಲ್ಲಾ ಶೈಕ್ಷಣಿಕ ವೆಚ್ಚವನ್ನು ವಾದಿಯೇ ಭರಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ವಾದಿಗೆ ರೂ.20,00,000/- ಹಣವನ್ನು ಖರ್ಚು ಮಾಡಿರುತ್ತೇನೆ ಎಂದು ತೋರಿಸಲು ನನ್ನ ಬಳಿ ಬ್ಯಾಂಕ್ ದಾಖಲೆ ಇರುವುದಿಲ್ಲ. ಸದ್ರಿ ಹಣವನ್ನು ನಾನು ಸಾಲ ಮಾಡಿ ಕೊಟ್ಟಿರುತ್ತೇನೆ. ಆದರೆ ಮನೆ ಕಟ್ಟಲು ಸಾಮಾಗ್ರಿಗಳನ್ನು ತಂದಿದ್ದು, ಅದಕ್ಕೆ ಪಾವತಿಸಿದ ಬಿಲ್ಲು ಇದೆ. ಕೃಷಿ ಮಾಡಿರುವ ಬಗ್ಗೆ ದಾಖಲೆ ಇರುವುದಿಲ್ಲ. ನಿಡಿ.5 ರಲ್ಲಿರುವ ದಾಖಲೆಗಳು ಜಿ.ಎಸ್.ಟಿ ಪಾವತಿ ಮಾಡಿದಂತಹ ದಾಖಲೆಗಳು ಅಲ್ಲ ಇಂದರೆ ಸರಿಯಲ್ಲ. ನಿಡಿ-5 ನೀಡಿದವರನ್ನು ವಿಚಾರಣೆ ಮಾಡಬಹುದು. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಬಿಲ್ ನಂಬರ್, ಜಿ.ಎಸ್.ಟಿ. ನಂಬರ್. ಸೇಲ್ಸ್ ನಂಬರ್ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಕೇಸಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಿಡಿ-8 ದಾಖಲೆ ಸತ್ಯಾಸತ್ಯತೆಯ ಬಗ್ಗೆ ಅದನ್ನು ನೀಡಿದವರ ವಿಚಾರಣೆ ಮಾಡಬಹುದು. ನನ್ನ ಕೋರಿಕೆಯ ಮೇರೆಗೆ ನಿಡಿ-8 ದಾಖಲೆಯನ್ನು ನೀಡಿರುವುದಾಗಿ ಹಾಗೂ ಆ ಕುರಿತು ತಾನು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ದಾಖಲೆಯಲ್ಲಿ ಕಾಣಿಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-8 ನಾನು ಓದಿ ತಿಳಿದುಕೊಂಡು ವಕೀಲರಿಗೆ ನೀಡಿರುತ್ತೇನೆ. ನಾನು 2020 ರಲ್ಲಿ ಗೋಲ್ಡನ್ ಗೇಟ್ ಬಾರ್ ಆಂಡ್ ರೆಸ್ಟೋರೆಂಟಿನಲ್ಲಿ ಕೆಲಸ ಮಾಡುತ್ತಿರುವಾಗಲೇ ರೂ.25,100/- ಮಾಸಿಕ ಸಂಬಳ ಇತ್ತು ಎಂದರೆ ಸರಿಯಲ್ಲ. ಅದನ್ನು ವಾದಿಯೇ ಸೃಷ್ಟಿಸಿರುತ್ತಾರೆ. ನಿಪಿ-10 ರಲ್ಲಿ ಕಾಣಿಸಿರುವ ಸಹಿ ನನ್ನದು ಎಂದರೆ ಸರಿಯಲ್ಲ. ನಿಪಿ-10 ಹಾಗೂ ವಕಾಲತ್ತಿನಲ್ಲಿರುವ ಸಹಿ ಒಂದೇ ಎಂದರೆ ಸರಿಯಲ್ಲ. ನಾನು ನನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ತನ್ನ ಮನೆ ನಿರ್ಮಾಣಕ್ಕಾಗಿ ಮಾಡಿದ ಸಾಲವನ್ನು ಈಗಲೂ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯು ಹಾಜರುಪಡಿಸಿದ ಬ್ಯಾಂಕ್ ದಾಖಲೆಗಳನ್ನು ಅನುಭವ ಮಾಡಿಕೊಂಡಿರುತ್ತೇನೆ. ವಾದಿಯ ತನ್ನ ತಾಯಿಗೆ ಸಂಬಂಧಿಸಿದ ಜಾಗದಲ್ಲಿ ಕಟ್ಟಿದ್ದ ಮನೆಯ ಸಾಲದ ದಾಖಲೆಗಳು ಎಂದರೆ ಸರಿಯಲ್ಲ. ವೈಯಕ್ತಿಕ ಸಾಲದ ದಾಖಲೆಗಳು. ಆ ಬಗ್ಗೆ ನಾನು ಬ್ಯಾಂಕಿನಲ್ಲಿ ವಿಚಾರಿಸಿರುವುದಿಲ್ಲ. ವಾದಿಯ ತಾಯಿ ಹೆಸರಿನಲ್ಲಿ ರೂ.6,00,00/- ಬ್ಯಾಂಕಿನಲ್ಲಿ ಸಾಲ ಮಾಡಿದ್ದು, ಅದನ್ನು ವಾದಿ ಪಾವತಿಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ಮನೆಯ ವಿಸ್ತೀರ್ಣ 950 ಚದರ ಮೀಟರು ಆಗಿರುತ್ತದೆ. ಸದ್ರಿ ಮನೆ ಕಟ್ಟಲು ರೂ.20,00,000/- ಖರ್ಚು ಆಗುವುದಿಲ್ಲ ಎಂದರೆ ಸರಿಯಲ್ಲ. ಮುಂದುವರಿದು ಮನೆಗೆ ರೂ.15,00,00/-, ಕೃಷಿ ಅಭಿವೃದ್ಧಿಗೆ ರೂ.5,00,000/- ಖರ್ಚಾಗಿರುತ್ತದೆ. 2017-18 ರಲ್ಲಿ ಚದರ ಅಡಿಗೆ ರೂ. 1,300 ರಿಂದ 1,500 ಖರ್ಚಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಕಂಟ್ರಾಕ್ಟ್ ಕೊಟ್ಟಿರುತ್ತೇನೆ.

ವಾದಿಯು ಒಬ್ಬಳೇ ಮಗಳಾಗಿದ್ದು, ಅವರ ಎಲ್ಲಾ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಡಬೇಕೆಂದು ವಾದಿಯ ತಾಯಿಗೆ ನಾನು ಒತ್ತಡ ಹಾಕುತ್ತಿದ್ದೆ ಹಾಗೂ ಮಾನಸಿಕ ಕಿರುಕುಳ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಈ ಬಗ್ಗೆ ವಾದಿ ಮಹಿಳಾ ಸಾಂತ್ವಾನ ಕೇಂದ್ರಕ್ಕೆ ತಿಳಿಸಿರುತ್ತಾರೆ ಎಂದರೆ ಸರಿ. ಮುಂದುವರಿದು ಸುಳ್ಳು ದೂರನ್ನು ನೀಡಿರುತ್ತಾರೆ. ನಿಪಿ-23 ರ ವರದಿ ಪ್ರಕಾರ ಮಹಿಳಾ ಸಾಂತ್ವಾನ ಕೇಂದ್ರದವರು ದೂರನ್ನು ಮುಕ್ತಾಯಗೊಳಿಸಿರುತ್ತಾರೆ ಎಂದರೆ ಸರಿ. ಆದಾದನಂತರವೂ ನಾನು ವಾದಿ ಹಾಗೂ ಮಗುವನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ವಾದಿ ಈ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮಂಗಳೂರಿಗೆ ಬಂದು ನನ್ನ ಜೊತೆ ವಾಸ ಮಾಡುವಂತೆ ಹೇಳಿರುತ್ತೇನೆ. ಆದರೆ ವಾದಿ ಒಪ್ಪಿ ರುವುದಿಲ್ಲ. ನಾನು ಆ ರೀತಿ ಕರೆದಿರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ-9 ಪೆನ್ ಡ್ರೈವ್ ನಲ್ಲಿರುವ ಎಲ್ಲಾ ಮಾಹಿತಿಯನ್ನು Instragram ನಿಂದ ಡೌನ್ ಮಾಡಿಕೊಂಡಿರುತ್ತೇನೆ. Instragram ನಿಂದ ಯಾವ ಆಪ್ ನಿಂದ ಡೌನ್ ಲೋಡ್ ಮಾಡಿರುತ್ತೀರಾ ಎಂದರೆ ನೇರವಾಗಿ Instragram ನಿಂದ ನನ್ನ ಮೊಬೈಲ್ ನಲ್ಲಿ ಸೇವ್ ಆಗಿರುತ್ತದೆ. ಮೊಬೈಲ್ ನಲ್ಲಿ ಹಲವಾರು ಆಪ್ ಗಳು ಇರುತ್ತದೆ ಎಂದರೆ ಸರಿ. ನನ್ನ ಮೊಬೈಲನ್ನು ಹಾಜರುಪಡಿಸಿದರೆ ಯಾವ ರೀತಿಯಾಗಿ ಡೌನ್ ಲೋಡ್ ಮಾಡಿರುತ್ತೇನೆ ಎಂದು ಗೊತ್ತಾಗುತ್ತದೆ ಎಂದರೆ ಒಂದು ವರ್ಷದ ಹಿಂದೆ ಮಾಡಿದ್ದು, ಅದನ್ನು ಪೆನ್ ಡ್ರೈವ್ ನಲ್ಲಿ ಸೇವ್ ಮಾಡಿರುತ್ತೇನೆ. ನನ್ನ ಮೊಬೈಲಿನಲ್ಲಿ ಅಳಿಸಿಹೋಗಿರುತ್ತದೆ. ಆ ಬಗ್ಗೆ ನನ್ನ ಪ್ರಮಾಣಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಿ.ಡಿ.ಎಫ್ ನಾನು ಮಾಡಿರುವುದಿಲ್ಲ. ನಾನು ಡೌನ್ ಮಾಡಿದ ಮಾಹಿತಿಗಳ ಲಿಂಕ್ ಯಾವುದು ಎಂಬುದರ ಬಗ್ಗೆ ಕಾಣಿಸಿರುವುದಿಲ್ಲ ಎಂದರೆ ಲಿಂಕ್ ಇರುವುದಿಲ್ಲ. ನಾನು ನನ್ನ ಹೆಂಡತಿ ಮತ್ತು ಮಗುವನ್ನು ನೋಡಿಕೊಳ್ಳಲು ಭಾಧ್ಯಸ್ಥ ಎಂದರೆ ಸರಿ. ಅದಕ್ಕಾಗಿ ಸಾಕಷ್ಟು ಖರ್ಚು ಮಾಡಿರುತ್ತೇನೆ. ಈಗಲೂ ನನ್ನ ಜೊತೆ ಬಂದರೆ ನಾನು ನೋಡಿಕೊಳ್ಳುತ್ತೇನೆ. ಮದುವೆಯಾದ ನಂತರ ನನ್ನ ಹೆಂಡತಿ ಮತ್ತು ಮಗುವಿನ ಜವಾಬ್ದಾರಿ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ನಡೆಸುತ್ತಿದ್ದ ಟೈಲರಿಂಗ್ ಶಾಪ್‌ನ ಮಾಲೀಕರಿಗೆ ನಾನು ಬೆದರಿಕೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ